**<u>ಸಾಕ್ಷಿಯನ್ನು ದಿನಾಂಕಃ 26-02-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ 1-3 ಪರ ವಕೀಲರವರಿಂದಃ</u>**

1. ನನಗೆ ಕಣ್ಣು ಸರಿಯಾಗಿ ಕಾಣುತ್ತದೆ ಅಂದರೆ ಸ್ವಲ್ಪ ಮಬ್ಬಾಗಿ ಕಾಣುತ್ತದೆ. ಕಿವಿ ಸರಿಯಾಗಿ ಕೇಳುತ್ತದೆ. ಪ್ರತಿವಾದಿಯರು ನಮ್ಮ ಊರಿನವರು. ನನಗೆ ಹುಟ್ಟಿದಾಗಿನಿಂದ ಅವರ ಪರಿಚಯ ಇರುವುದು. ನನ್ನ ಹೊಲದ ಪಕ್ಕದಲ್ಲಿ 1ನೇ ಪ್ರತಿವಾದಿಯು ಕೃಷಿ ಹೊಂಡ ತೆಗೆಯುತ್ತಿದ್ದ ಕಾರಣ ನಾನು ಪೊಲೀಸರಿಗೆ ಆತನ ವಿರುದ್ಧ ಪಿರ್ಯಾದಿಯನ್ನು ನೀಡಿದ್ದೆ. ನನ್ನ ಹೊಲದ ಪೂರ್ವ ದಿಕ್ಕಿಗೆ 1ನೇ ಪ್ರತಿವಾದಿಯು ಕೃಷಿ ಹೊಂಡವನ್ನು ತೆಗೆಯುತ್ತಿದ್ದನು. ಆತನು ವಾದಿಯ ಹೊಲದಲ್ಲಿ ಹೊಂಡ ತೆಗೆಯುತ್ತಿದ್ದನು.

2. ವಾದಿಯ ಹೊಲದಲ್ಲಿ 1ನೇ ಪ್ರತಿವಾದಿ ಹೊಂಡವನ್ನು ತೆಗೆದರೆ ನಾನು ಯಾಕೆ ಪಿರ್ಯಾದಿ ಕೊಟ್ಟೆ ಅಂದರೆ ನಾನು ಕೊಟ್ಟಿರುವುದಿಲ್ಲ ಬದಲಾಗಿ 1ನೇ ಪ್ರತಿವಾದಿಯೇ ಕೊಟ್ಟಿರುವನು ಎಂದು ನುಡಿದರು. ಆ ಕೇಸು ರಾಜಿಯಲ್ಲಿ ಮುಕ್ತಾಯಗೊಂಡಿರುತ್ತದೆ. ವಾದಿ ನಮ್ಮ ಊರಿನವರು. ಅವರು ಹುಟ್ಟಿದಾಗಿನಿಂದ ಅಲ್ಲಿಯೇ ಇರುವರು. ಆಲೂರು ಹಟ್ಟಿಯಲ್ಲಿರುವ ಶಾಂತವೀರನಾಯ್ಕ ಯಾರು ಅಂದರೆ ವಾದಿಯೇ ಅಲ್ಲಿ ಇರುವನು, ವಾದಿಯು ಮತದಾನವನ್ನು ಹಾಲೂರು ಹಟ್ಟಿಯಲ್ಲಿ ಮಾಡುವನು ಅಂದರೆ ಸರಿಯಲ್ಲ.

**ಸಾಕ್ಷಿಯ ಸಹಿ** 26.02.2026

3. ಶಾಂತವೀರನಾಯ್ಕನಿಗೆ 4 ಎಕರೆ ಹೊಲವನ್ನು ಸರ್ಕಾರವು ಮಂಜೂರು ಮಾಡಿರುವುದು, ನನಗೆ ಆ ಹೊಲದ ಸರ್ವೆ ನಂಬರು 1/ಪಿ ಎಂದು ಇರುವುದು. ನನಗೆ ಪಟ್ಟಾ ಸಂಖ್ಯೆ ಮತ್ತು ದಿನಾಂಕ ಗೊತ್ತಿರುವುದಿಲ್ಲ. ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ನಿರ್ದಿಷ್ಟವಾದ ಸರ್ವೆ ನಂಬರನ್ನು ಬರೆಸಿರುವುದಿಲ್ಲ. ದಾವಾ ಅಸ್ತಿಯ ಪಶ್ಚಿಮಕ್ಕೆ ನನ್ನ ಹೊಲ ಇರುವುದು. ಆ ವಿಚಾರವನ್ನು ಮುಖ್ಯ ವಿಚಾರಣೆಯಲ್ಲಿ ಬರೆಸಿರುವುದಿಲ್ಲ. ನನಗೆ ಪ್ರತಿವಾದಿಯ ವಿರುದ್ಧ ಮನಸ್ತಾಪ ಇರುವ ಕಾರಣ ವಾದಿಯ ಮುಖಾಂತರ ಈ ಕೇಸನ್ನು ಹಾಕಿಸಿದ್ದೇನೆ ಅಂದರೆ ಸರಿಯಲ್ಲ.

4. ನನಗೆ ಶೇಷಗಿರಿ ನಾಯ್ಕನ ಪರಿಚಯ ಇರುತ್ತದೆ. ಅವರಿಬ್ಬರಿಗೂ ಹೇಳಿಕೊಟ್ಟು 1ನೇ ಪ್ರತಿವಾದಿಯ ಮೇಲೆ ನಾನೇ ಕೆಸು ಹಾಕಿದ್ದೇನೆ ಅಂದರೆ ಸರಿಯಲ್ಲ. ಸರ್ಕಾರವು ಶಾಂತವೀರನಾಯ್ಕನಿಗೆ ದಾವಾ ಅಸ್ತಿಯನ್ನು ಪಟ್ಟಾ ಮಂಜೂರು ಮಾಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಯು ಹುಟ್ಟಿದಾಗಿನಿಂದ ದಾವಾಣಗೆರೆ ತಾಲೂಕಿನ ಹಾಲೂರು ಹಟ್ಟಿಯ ನಿವಾಸಿ ಅಂದರೆ ಸರಿಯಲ್ಲ. ಆತನು ಬಾಪೂರಜಿ ನರಗದಲ್ಲಿ ವಾಸವೇ ಇರುವುದಿಲ್ಲ ಅಂದರೆ ಸರಿಯಲ್ಲ.

5. ಶಾಂತವಿರೇನಾಯ್ಕನ ಮಾವನಾದ ಜಾನ್ಯನಾಯ್ಕ ತಾಲೂಕು ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದು ಪಟ್ಟಾ ದಾಖಲೆಯನ್ನು ಸುಳ್ಳಾಗಿ ಸೃಷ್ಟಿಸಿರುವನು ಅಂದರೆ ಸರಿಯಲ್ಲ. ನನಗೆ ಜಾನ್ಯ ನಾಯ್ಕ ಪರಿಚಯ ಇರುವನು

ಅಂದರೆ ಸರಿಯಲ್ಲ. ಆತನಿಗೆ ದಾಖಲೆ ಸೃಷ್ಟಿ ಮಾಡಿದ್ದಕ್ಕೆ ಇದೇ ನ್ಯಾಯಾಲಯದಲ್ಲಿ ಸಿಸಿ ನಂ 341/2008 ರಲ್ಲಿ ಶಿಕ್ಷೆ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹಿತ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಶಾಂತವೀರನಾಯ್ಕನ ಮಾತನ್ನು ಕೇಳಿಕೊಂಡು ಸುಳ್ಳು ಹೇಳುತಿದೇನೆ ಅಂದರೆ ಸರಿಯಲ್ಲ. 1 ನೆ ಪ್ರತಿವಾದಿಯ ಹೊಲದ ಅಕ್ಕ ಪಕ್ಕದಲ್ಲಿ ನನ್ನ ಜಮೀನೇ ಇರುವುದಿಲ್ಲ ಅಂದರೆ ಸರಿಯಲ್ಲ.

**ಪಾಟೀಸವಾಲುಃ ಪ್ರತಿವಾದಿ 4 ನೇ ಪರ ವಕೀಲರವರಿಂದಃ**

1. ನನಗೆ 4 ನೇ ಪ್ರತಿವಾದಿ ಪರಮೇಶನಾಯ್ಕನ ಪರಿಚಯ ಇರುವುದು. ಆತ ಅಲ್ಲಿಯಾಳ ತಾಂಡದವನು. ಆತ ಉದ್ಗಟ್ಟಿ ತಾಂಡದ ನಿವಾಸಿ ಅಂದರೆ ಸರಿ. ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ಪರಮೇಶ್ವರನಾಯ್ಕನು ಅಲ್ಲಿಯಾಳ ತಾಂಡದ ನಿವಾಸಿ ಎಂದು ಬರೆಸಿರುವುದಿಲ್ಲ. ವಾದಿಯು ಮೂಲತಃ ಉದ್ಗಟ್ಟಿ ಬಾಪೂಜಿ ನಗರದ ನಿವಾಸಿ. ದಾವಾ ಅಸ್ತಿಯ ಸರ್ವೆ ನಂಬರು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ಉದ್ಗಟ್ಟಿ ತಂಡಾದಲ್ಲಿ ಪರಮೇಶ್ವರ ನಾಯ್ಕನಿಗೆ 1 ಎಕರೆ 70 ಸೆನ್ಸ ನ್ನು ಸರ್ಕಾರ ಪಟ್ಟಾ ಮಂಜೂರು ಮಾಡಿದೆ ಅಂದರೆ ಸಾಕ್ಷಿಯು 4-5 ಹೊಲಗಳನ್ನು ಬಿಟ್ಟು ಪರಮೇಶ್ವರ ನಾಯ್ಕನಿಗೆ ಮಂಜುರಾದ ಹೊಲ ಇರುವುದು ಎಂದು ನುಡಿದಿರುವರು.

2. ಪರಮೇಶ್ವರ ನಾಯ್ಕನಿಗೆ ಪಟ್ಟಾ ಅಗಿರುವ ಜಮೀನಿನ ಪೂರ್ವಕ್ಕೆ ಮಾನ್ಯ ನಾಯ್ಕನ ಜಮೀನು ಇದೆ ಅಂದರೆ ಸರಿ. ಪಶ್ಚಿಮಕ್ಕೆ ಗೊಕಟ್ಟೆ ಇದೆ

ಅಂದರೆ ಸರಿ. ಉತ್ತರಕ್ಕೆ ರಸ್ತೆ ಇದೆ ಸರಿ. ಆ ಜಮೀನಿನ ದಕ್ಷಿಣಕ್ಕೆ ಹಾಲಿಬಾಯಿ ಜಮೀನು ಇದೆ ಅಂದರೆ ಸರಿಯಲ್ಲ. ಸರ್ವೆ ನಂ 1/ಬಿಯ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ ಅದರಲ್ಲಿ ಯಾರು ಯಾರು ಎಷ್ಟು ಸಾಗುವಳಿ ಮಾಡುತ್ತಿರುವರು ಎಂದು ನನಗೆ ಗೊತ್ತಿಲ್ಲ.

3. ನನಗೆ ಶಾಂತವೀರನಾಯ್ಕನಿಗೆ ಪಟ್ಟಾ ಮಂಜುರಾದ ದಿನಾಂಕ ಗೊತ್ತಿರುವುದಿಲ್ಲ. ಪರಮೇಶ್ವರಪ್ಪ ತನಗೆ ಪಟ್ಟಾ ಮಂಜುರಾದ 1 ಎಕರೆ 70 ಸೆಂಟ್ಸ ನಲ್ಲ ಸಾಗುವಳಿ ಮಾಡುತ್ತಿರುವರು ಅಂದರೆ ಸರಿಯಲ್ಲ. ನಾನು ಹಲವಾರು ಪ್ರಕರಣದಲ್ಲಿ ಸಾಕ್ಷಿದಾರನಾಗಿ ಬಂದು ಸಾಕ್ಷಿ ಹೇಳಿದ್ದೇನೆ ಅಂದರೆ ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಉಳಿದಂತೆ 1 ರಿಂದ 3 ನೇ ಪ್ರತಿವಾದಿಯ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುವರು.</u>

<u>ಮರು ವಿಚಾರಣೆಃ ಇಲ್ಲ</u>

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

26-02-2026
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 26.02.2026